ಓ ಎಸ್ ನಂ.119/2021

ಡಿ .ಡಬ್ಲ್ಯೂ :1

ದಿನಾಂಕ :04-09-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>

ಮುಖ್ಯ ವಿಚಾರಣೆ ಪ್ರಮಾಣ ಪತ್ರದ 3 ನೇ ವಾಕ್ಯವೃಂದದಲ್ಲಿ ಸೀಬನಯ್ಯ ರವರು ದಿಃ 04-06-1953 ರಿಂದಲೂ 2 ಎಕರೆ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ತಿಳಿಸಿದ್ದೀರಿ ಎಂದರೆ ಸಾಕ್ಷಿಯು ಸುಳ್ಳು, ನಾವೇ ಸ್ವಾಧೀನದಲ್ಲಿದ್ದೇವೆ ಎಂದು ತಿಳಿಸಿದ್ದಾರೆ . ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದೇವೆ ಎಂದು ತೋರಿಸಲು ಪಹಣಿಗಳನ್ನು ಹಾಜರುಪಡಿಸಿದ್ದೇನೆ. ಸೀಬನಯ್ಯ ರವರಿಂದ ನಿಮ್ಮ ಹೆಸರಿಗೆ ಪಹಣಿ ಹೇಗೆ ದಾಖಲಾಯಿತು ಎಂದರೆ ಸಾಕ್ಷಿಯ ಒಟ್ಟು ಕುಟುಂಬದಲ್ಲಿದ್ದೆವು , ನನ್ನ ತಂದೆ ನನಗೆ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿದ್ದಾರೆ ಎಂದು ತಿಳಿಸಿದ್ದಾರೆ . ನಿಡಿ -1 ಪಹಣಿಯಲ್ಲಿ ಗಂಗಯ್ಯ ರವರ ಹೆಸರನ್ನು ಸೃಷ್ಟಿತ ದಾಖಲೆಯ ಆಧಾರದಲ್ಲಿ ಸೇರಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಡಿ -3 ರಿಂದ 23 ಪಹಣಿಗಳನ್ನು ದಾವೆಗಾಗಿ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪಹಣಿಗಳಲ್ಲಿ ಸೀಬನಯ್ಯ ಮತ್ತು ಅವರ ಕುಟುಂಬದವರ ಹೆಸರುಗಳು ಬರಬೇಕಿತ್ತು ಆದರೆ ರೆವಿನ್ಯೂ ಕಚೇರಿಯಲ್ಲಿ ನಮ್ಮ ಹೆಸರುಗಳನ್ನು ಸೇರಿಸಿಕೊಂಡಿದ್ದೇವೆ ಎಂದರೆ ಸರಿ . ದಾವಾ ಸ್ವತ್ತು ಬೇರೆಯವರಿಗೆ ಸೇರಿದ್ದು ಎಂಬುದು ತಿಳಿದಿದ್ದರೂ ಸಹಾ ಬ್ಯಾಂಕಿನಲ್ಲಿ ನೀವು ಸಾಲ ಪಡೆದಿದ್ದೀರಿ ಎಂದರೆ ಸಾಕ್ಷಿಯು ನನ್ನ ತಂದೆ ಸಾಲ ಪಡೆದಿದ್ದರು ನಾನು ಸಹಾ ಸಾಲ ಪಡೆದಿದ್ದೇನೆ ಎಂದು ತಿಳಿಸಿದ್ದಾರೆ . ಸರ್ವೆ ನಂ . 154 /3 ಎ ರಲ್ಲಿ 3 ಎಕರೆ 17 ಗುಂಟೆ ಸ್ವತ್ತಿನ ಮೇಲೆ ನೀವು ಸಾಲ ಪಡೆಯಬೇಕಿತ್ತು , ಆದರೆ ದಾವಾ ಸ್ವತ್ತಿನ ಮೇಲೆ ಸಾಲ ಪಡೆದಿದ್ದೀರಿ ಎಂದರೆ ಸಾಕ್ಷಿಯು ಎರಡೂ ಸ್ವತ್ತುಗಳ ಮೇಲೆ ಸಾಲ ಪಡೆದಿದ್ದೇನೆ ಎಂದು ತಿಳಿಸಿದ್ದಾರೆ . ಯಾವುದೇ ಸಾಲ ಪಡೆಯಬೇಕಿದ್ದಲ್ಲಿ ಬ್ಯಾಂಕಿಗೆ ಸ್ವತ್ತಿನ ಮೂಲ ದಾಖಲೆಗಳನ್ನು ಸಲ್ಲಿಸಬೇಕು, ನೀವು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ನನ್ನ ತಂದೆ ದಾಖಲೆಗಳನ್ನು ಸಲ್ಲಿಸಿ ಸಾಲ ಪಡೆದಿದ್ದರು ನಾನು ಅದನ್ನು ಮುಂದುವರೆಸಿದ್ದೇನೆ ಎಂದು ತಿಳಿಸಿದ್ದಾರೆ . ದಾವಾ ಸ್ವತ್ತಿಗೆ ಸಂಬಂಧಿಸಿ ಬ್ಯಾಂಕಿಗೆ ಯಾವುದೇ ದಾಖಲೆಗಳನ್ನು ಸಲ್ಲಿಸದೆ ನಾವು ಸಾಲ ಪಡೆದಿದ್ದೇವೆ ಎಂದರೆ ಸರಿಯಲ್ಲ. ನಿಡಿ -27 ಕ್ಕೆ ಸಂಬಂಧಿಸಿ

ಕೊರತೆ ಸ್ಟಾಂಪ್ ಶುಲ್ಕವನ್ನು ಪಾವತಿಸಿದ್ದೀರಾ ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ . ನಿಡಿ -27 ರಲ್ಲಿ ಪಂಚಾಯಿತಿದಾರರ ಸಹಿ ಎಂಬುದಾಗಿ ಇರುವ ಸ್ಥಳದಲ್ಲಿ ನರಸಿಂಹಯ್ಯ ಬಿನ್ ಸೀಬನಯ್ಯ ರವರ ಹೆಸರು ಇರುವುದಿಲ್ಲ ಎಂದರೆ ಸಾಕ್ಷಿಯು ನರಸಿಂಹಯ್ಯ ರವರ ಹೆಸರು ಇರುತ್ತದೆ ಎಂದು ತಿಳಿಸಿದ್ದಾರೆ . ಸದರಿ ನರಸಿಂಹಯ್ಯ ಎಂಬ ಸಹಿ 1 ನೇ ವಾದಿಯ ಗಂಡನ ಸಹಿ ಅಲ್ಲ ಎಂದರೆ ಸರಿಯಲ್ಲ. ಎಂ ಆರ್ ನಲ್ಲಿಯೂ ಸಹಾ ಸೀಬನಯ್ಯ ರವರ ಹೆಸರನ್ನು ತೆಗೆದು ಹಾಕಿಸಿ ನಿಮ್ಮ ಹೆಸರನ್ನು ದಾಖಲಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ . ನಿಡಿ -25 ರಲ್ಲಿ ಸೀಬನಯ್ಯ ರವರಿಂದ ಯಾವ ದಾಖಲೆಯ ಆಧಾರದ ಮೇಲೆ ನಿಮಗೆ ಸ್ವತ್ತು ಬಂದಿದೆ ಎಂಬ ವಿವರಗಳು ಇರುವುದಿಲ್ಲ ಎಂದರೆ ಸಾಕ್ಷಿಯು ನಿಡಿ -25 ನನ್ನ ತಂದೆ ನನಗೆ ನೋಂದಾಯಿಸಿಕೊಟ್ಟಿರುವ ಹಕ್ಕು ಖುಲಾಸೆ ಪತ್ರ ಎಂದು ತಿಳಿಸಿದ್ದಾರೆ . ಯಾವುದೇ ಒಂದು ನೋಂದಾಯಿತ ದಾಖಲೆ ಬರೆಯಬೇಕಿದ್ದಲ್ಲಿ ಬರೆದುಕೊಡುವ ವ್ಯಕ್ತಿಗೆ ಯಾವ ದಾಖಲೆಗಳ ಆಧಾರದಲ್ಲಿ ಸ್ವತ್ತು ಬಂದಿತ್ತು ಎಂಬ ವಿವರಗಳನ್ನು ಬರೆಯಬೇಕು ಎಂದರೆ ಸಾಕ್ಷಿಯು ಅದು ನನ್ನ ತಂದೆಯ ಒಟ್ಟು ಕುಟುಂಬದ ಸ್ವತ್ತು ಅದನ್ನು ನನಗೆ ಬರೆದುಕೊಟ್ಟಿದ್ದಾರೆ ಎಂದು ತಿಳಿಸಿದ್ದಾರೆ . ನಿಡಿ -30 ರಲ್ಲಿ ನರಸಿಂಹಯ್ಯ ರವರ ಹೆಸರನ್ನು ತೆಗೆದು ಹಾಕಿ ನನ್ನ ಹೆಸರು ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವೆಗೆ ಅನುಕೂಲವಾಗಲೆಂದು ನಿಡಿ -30 ನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಡಿ -30 ರಲ್ಲಿ ತೋರಿಸಿರುವ ಸರ್ವೆ ನಂ.154/3 ಬಿ ಎಂಬ ವಿವರಗಳಿಗೆ ಸಂಬಂಧಿಸಿ ಸರ್ವೆ ನಕ್ಷೆ ಟಿಪ್ಪಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ . ನಿಪಿ -12 ದಾಖಲೆಯಲ್ಲಿ ಸರ್ವೆ ನಂ. 154/3 ಬಿ ನಲ್ಲಿ 2 ಎಕರೆ ಸ್ವತ್ತಿಗೆ ಸಂಬಂಧಿಸಿ ಸೀಬನಯ್ಯ ರವರ ಹೆಸರು ದಾಖಲಾಗಿದೆ ಎಂದರೆ ಸರಿಯಲ್ಲ. ಆ ಪ್ರಕಾರವೇ ಇಂದಿಗೂ ಸಹಾ ವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ನಿಡಿ-32 ರ ದಾಖಲೆ ಸರ್ವೆ ನಂ. 154/3 ಎ ನಲ್ಲಿ ನಾನು ಮನೆ ನಿರ್ಮಿಸಿರುವ ಸಂಬಂಧ ವಿದ್ಯುತ್ಚಕ್ತಿ ಬಿಲ್ ಎಂದರೆ ಸರಿಯಲ್ಲ . ನಿಡಿ -34 ಮತ್ತು 35 ರಲ್ಲಿ ಸರ್ವೆ ನಂ. 154/3 ಎ ಕ್ಕೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿಯಲ್ಲ . ನಾನು ಪಹಣಿ ಮತ್ತು ಎಂ ಆರ್ ಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂಬುದಾಗಿ ಚೇಳೂರು ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ದ ಸಿ ಆರ್ ನಂ . 178/ 2022 ರಂತೆ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದರೆ ಸಾಕ್ಷಿಯು ವಾದಿಗಳು ನಮ್ಮ ಸ್ವಾಧೀನಕ್ಕೆ ತೊಂದರೆ ನೀಡಿದ್ದರು ಎಂದು ಉತ್ತರಿಸಿದ್ದಾರೆ . ಸದರಿ ವಿಚಾರಕ್ಕೆ ಸಂಬಂಧಿಸಿ ವಾದಿಗಳು ನಿಪಿ -29 ರಂತೆ ತುಮಕೂರಿನ ಎಸ್ ಪಿ ರವರಿಗೆ ಸಹಾ ದೂರನ್ನು ನೀಡಿದ್ದಾರೆ ಎಂದರೆ ನೀಡಿರುವುದು ನಿಜ ಎಂದು ಸಾಕ್ಷಿ

ಹೇಳಿದ್ದಾರೆ . ಸ್ವತ್ತುಗಳಿಗೆ ಸಂಬಂಧಿಸಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಸ್ವತ್ತುಗಳನ್ನು ಬೇರೆಯವರಿಗೆ ಮಾರಾಟ ಮಾಡಿದ್ದೀರಿ ಎಂಬ ವಿಚಾರವಾಗಿ ತಹಸೀಲ್ದಾರ್ ಗುಬ್ಬಿರವರ ಬಳಿ ಕೂಡ ದೂರ ನೀಡಲಾಗಿದೆ ಎಂದರೆ ಸರಿಯಲ್ಲ. ಸಿ ಆರ್ 178/2022 ಕ್ಕೆ ಸಂಬಂಧಿಸಿದ ಪ್ರಕರಣ ಇಂದಿಗೂ ಸಹಾ ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ , ಗುಬ್ಬಿ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದೆ ಎಂದರೆ ಸರಿಯಲ್ಲ. ನಿಪಿ-7 ರ ಪ್ರಕಾರ ಸಿದ್ದಪ್ಪ ರವರು ನನ್ನ ವಿರುದ್ದ ತುಮಕೂರು DDLR ರವರ ಸಮಕ್ಷಮ ಮೇಲ್ಮನವಿ ದಾಖಲಿಸಿದ್ದರು ಎಂದರೆ ಸರಿ . ಸದರಿ ಮೇಲ್ಮನವಿಯ ಆದೇಶದಲ್ಲಿ ಸರ್ವೆ ನಂ. 154/3 ಬಿ ಸ್ವತ್ತು ಸೀಬನಯ್ಯ ರವರಿಗೆ ಸೇರಿದ್ದು ಎಂಬುದಾಗಿ ತಿಳಿಸಲಾಗಿದೆ ಎಂದರೆ ಸರಿಯಲ್ಲ.

ಸರ್ವೆ ಮಾಡಿಸಿರುವ ಸಂಬಂಧ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ . ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದಲ್ಲಿ ಸತ್ಯಾಂಶ ತಿಳಿಯುತ್ತದೆ ಎಂಬ ಕಾರಣಕ್ಕೆ ಅದನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸುತ್ತೇನೆ ಎಂದು ತಿಳಿಸಿದ್ದಾರೆ . ತುಮಕೂರು ADLR ರವರ ಆದೇಶವನ್ನು ಪ್ರಶ್ನಿಸಿ JDLR ರವರ ಮಂದೆ ಮೇಲ್ಮನವಿ ಸಲ್ಲಿಸಿದ್ದಿರಿ , ಅದು ವಜಾ ಗೊಂಡಿದೆ ಎಂದರೆ ಸರಿಯಲ್ಲ. ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ದಾಖಲಾಗಿರುವ ಪಹಣಿ ಮತ್ತು ಎಂ ಆರ್ ನ್ನು ಪ್ರಶ್ನಿಸಿ ವಾದಿಗಳು ವಾದಿಗಳು ಎ ಸಿ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ, ಅದು ವಜಾಗೊಂಡಿದೆ ಎಂದು ಸಾಕ್ಷಿ ಹೇಳಿದ್ದಾರೆ . ಯಾವಾ ಕಾರಣಕ್ಕೆ ವಜಾ ಗೊಂಡಿದೆ ಎಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿದ್ದ ಕಾರಣ ವಜಾಗೊಂಡಿದೆ ಎಂದು ತಿಳಿಸಿದ್ದಾರೆ . ಡಿ ಸಿ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಹಾ ಅದೇ ಕಾರಣದ ಮೇಲೆ ವಜಾ ಮಾಡಲಾಗಿದೆ ಎಂದರೆ ಸರಿ .
ನ್ಯಾಯಾಲಯದ ಬೆಳಗಿನ ಕಲಾಪದ ವೇಳೆ ಮುಕ್ತಾಯಗೊಂಡಿದ್ದರಿಂದ ಮುಂದುವರೆದ ಪಾಟಿ ಸವಾಲನ್ನು ಮಧ್ಯಾಹ್ನ 3.00 ಗಂಟೆ ಮುಂದೂಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ

ಮಧ್ಯಾಹ್ನ 4.00 ಗಂಟೆಗೆ ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನಿಪಿ-12 ಟಿಪ್ಪಣಿಯಲ್ಲಿ ಎಂ ಆರ್ 11/1962-63 ಎಂಬುದಾಗಿ ನಮೂದಾಗಿದ್ದರೂ ಸಹಾ ಸದರಿ ಎಂ ಆರ್ ನ್ನು ಬದಲಾವಣೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ . ಪಂಚಾಯಿತಿ ಪಾರಿಕತ್ ನಲ್ಲಿ ಸೀಬನಯ್ಯ ಅಥವಾ ನರಸಿಂಹಯ್ಯ ರವರ ಹೆಸರನ್ನು ಎಲ್ಲಿಯೂ ತೋರಿಸಿಲ್ಲ ಎಂದರೆ ಸರಿಯಲ್ಲ . 1953 ರಿಂದ ಇಂದಿನವರೆಗೂ ಇ ಸಿ ಯಲ್ಲಿ ಸೀಬನಯ್ಯ ನವರ ಹೆಸರು ಬರುತ್ತಿದೆ ಎಂದರೆ ಸರಿಯಲ್ಲ. ಸೀಬನಯ್ಯ ಅಥವಾ ಅವರ ಕುಟುಂಬದವರು ದಾವಾ ಸ್ವತ್ತಿಗೆ ಸಂಬಂಧಿಸಿ ಯಾರಿಗೂ ಯಾವುದೇ ದಾಖಲೆ ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿಯು ನರಸಿಂಹಯ್ಯ ರವರು ಬರೆದುಕೊಟ್ಟಿದ್ದಾರೆ ಎಂದು ತಿಳಿಸಿದ್ದಾರೆ . ನರಸಿಂಹಯ್ಯ ರವರು ಏನು ದಾಖಲೆ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯುಪಾರಿಕತ್ ಗೆ ಸಹಿ ಮಾಡಿದ್ದಾರೆ ಎಂದು ಉತ್ತರಿಸಿದ್ದಾರೆ . ಪಾರಿಕತ್ ನಲ್ಲಿ ಕಂಡುಬರುವ ಸಹಿ ಸೀಬನಯ್ಯ ರವರ ಮಗ ನರಸಿಂಹಯ್ಯ ರವರದ್ದಲ್ಲ , ಆದರೂ ಸಹಾ ಅವರು ಪಾರಿಕತ್ ಗೆ ಸಹಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಾರಿಕತ್ ಗೆ ಸಹಿ ಮಾಡಿರುವ ಸಾಕ್ಷಿದಾರರನ್ನು ನ್ಯಾಯಾಲಯಕ್ಕೆ ಸಾಕ್ಷಿಗಳನ್ನಾಗಿ ಕರೆಸಬಹುದೇ ಎಂದರೆ ಸಾಕ್ಷಿಯು ಸದರಿ ಪಾರಿಕತ್ ಗೆ ಸಾಕ್ಷಿಯಾಗಿ ಸಹಿ ಮಾಡಿರುವ ಒಬ್ಬರು ಸಾಕ್ಷಿದಾರರು ಮಾತ್ರ ಬದುಕಿದ್ದಾರೆ ಅವರನ್ನು ಕರೆಸಲು ಯಾವುದೇ ತೊಂದರೆ ಇಲ್ಲಎಂದು ತಿಳಿಸಿದ್ದಾರೆ . ಪಾರಿಕತ್ ನಲ್ಲಿ ಕಂಡುಬರುವ ಸಹಿ ಸೀಬನಯ್ಯ ರವರ ಮಗ ನರಸಿಂಹಯ್ಯ ರವರದ್ದು ಎಂದು ಸಾಬೀತುಗೊಳಿಸಲು ಕೈ ಬರಹ ತಜ್ಞರ ಅಭಿಪ್ರಾಯ ಪಡೆದು ವರದಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ತಿಳಿಸಿದ್ದಾರೆ . ದಾವಾ ಸ್ವತ್ತಿನಲ್ಲಿ ಅಡಿಕೆ ಮತ್ತು ತೆಂಗಿನ ಬೆಳೆಗಳನ್ನು ಬೆಳೆದುಕೊಂಡು ಇಂದಿಗೂ ಸಹಾ ವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನು ಸರ್ವೆ ನಂ. 154/3 ಎ ಸ್ವತ್ತಿನಲ್ಲಿ ಸ್ವಾಧೀನ ಹೊಂದಿದ್ದೇನೆ , ದಾವಾ ಸ್ವತ್ತಿನಲ್ಲಿ ಸ್ವಾಧೀನ ಹೊಂದಿಲ್ಲ ಎಂದರೆ ಸರಿಯಲ್ಲ, ಎರಡೂ ಸ್ವತ್ತಿನಲ್ಲಿಯೂ ಸಹಾ ಸ್ವಾಧೀನ ಹೊಂದಿದ್ದೇನೆ ಎಂದು ಸಾಕ್ಷಿ ಹೇಳಿದ್ದಾರೆ . ನಾನು ಹೇಳುವಂತೆ ನನ್ನ ಮತ್ತು ವಾದಿಗಳ ನಡುವೆ ಒಟ್ಟು ಕುಟುಂಬದ ಸಂಬಂಧ ಇಲ್ಲ ಎಂದರೆ ಸರಿಯಲ್ಲ , ಸೀಬನಯ್ಯ ರವರ ತಂಗಿ ಗಂಗಮಾಳಮ್ಮ ರವರು ನನ್ನ ತಂದೆಯ ತಾಯಿ ಎಂದು ಸಾಕ್ಷಿ ಹೇಳಿದ್ದಾರೆ .

ಗಂಗಯ್ಯ ಮತ್ತು ನಂಜಯ್ಯ ರವರು ಎಷ್ಟು ಸ್ವತ್ತುಗಳನ್ನು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ . ಗಂಗಯ್ಯ ಮತ್ತು ನಂಜಯ್ಯ ರವರು ಯಾವುದೇ ಸ್ವತ್ತುಗಳನ್ನು ಹೊಂದಿಲ್ಲದಿದ್ದ ಕಾರಣ ಸೀಬನಯ್ಯ ರವರೇ ಅವರುಗಳಿಗೆ ಸರ್ವೆ ನಂ. 154/3 ಎ ನಲ್ಲಿ 3 ಎಕರೆ 17 ಗುಂಟೆ ಸ್ವತ್ತುಗಳನ್ನು ಖರೀದಿಸಲು ಹಣ ಸಹಾಯ ಮಾಡಿದ್ದರು ಎಂದರೆ ಸರಿಯಲ್ಲ. ಸೀಬನಯ್ಯ ರವರ ಕುಟುಂಬದವರು ಸದರಿ ಹಣವನ್ನು ಹಿಂತಿರುಗಿಸುವಂತೆ ಕೇಳಿದಲ್ಲಿ 3 ಎಕರೆ 17 ಗುಂಟೆ ಸ್ವತ್ತನ್ನು ಬಿಟ್ಟುಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಮತ್ತು ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಂಗಯ್ಯ, ನಂಜಯ್ಯ ಮತ್ತು ಸೀಬನಯ್ಯ ರವರ ಕುಟುಂಬದ ನಡುವೆ ಯಾವುದಾದರು ವಿಭಾಗ ಪತ್ರ ಆಗತ್ತೇ ಎಂದರೆ ಸಾಕ್ಷಿಯು ಯಾವುದೇ ಪತ್ರ ಆಗಿಲ್ಲ , ಹಾಗೆಯೇ ಸ್ವತ್ತುಗಳನ್ನು ನೀಡಿದ್ದಾರೆ ಎಂದು ತಿಳಿಸಿದ್ದಾರೆ . ಸೀಬನಯ್ಯ ರವರ ಕುಟುಂಬದವರಿಂದ ನಾವು ದಾವಾ ಸ್ವತ್ತಿಗೆ ಸಂಬಂಧಿಸಿ ಯಾವುದೇ ದಾಖಲೆಯನ್ನು ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿಯು ನಾವು ಒಂದೇ ಕುಟುಂಬದವರು ಆದುದರಿಂದ ಬರೆದುಕೊಟ್ಟಿಲ್ಲ ಎಂದು ತಿಳಿಸಿದ್ದಾರೆ . ದಾವಾ ಸರ್ವೆ ನಂಬರ್ ನಲ್ಲಿ 2 ಎಕರೆ ಸ್ವತ್ತು ನಮಗೆ ಸೇರಿದ್ದು ಎಂದು ನ್ಯಾಯಾಲಯದಿಂದ ಘೋಷಣಾತ್ಮಕ ಆದೇಶ ಪಡೆದಿದ್ದೀರಾ ಎಂದರೆ ಸಾಕ್ಷಿಯು ಆ ರೀತಿ ಆದೇಶ ಪಡೆದಿಲ್ಲ , ನನ್ನ ತಂದೆಯ ಹೆಸರಿನಲ್ಲಿ ಸ್ವತ್ತು ಇತ್ತು , ನನ್ನ ಹೆಸರಿಗೆ ಮಾಡಿಕೊಂಡಿದ್ದೇನೆ ಎಂದು ತಿಳಿಸಿದ್ದಾರೆ . ನಿಮ್ಮ ತಂದೆಯ ಹೆಸರಿಗೆ ದಾವಾ ಸ್ವತ್ತಿನ ಖಾತೆ ದಾಖಲಿಸುವಂತೆ ತಹಸೀಲ್ದಾರ್, ಎ ಸಿ ಅಥವಾ ಡಿ ಸಿ ನ್ಯಾಯಾಲಯದಲ್ಲಿ ಆದೇಶವಾಗಿದೆಯೇ ಎಂದರೆ ನನ್ನ ತಂದೆ ಯಾವ ರೀತಿ ಖಾತೆ ಮಾಡಿಸಿಕೊಂಡರೋ ನನಗೆ ಗೊತ್ತಿಲ್ಲ ಎಂದು ತಿಳಿಸಿದ್ದಾರೆ . ನಿಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು RRT ಆದೇಶವಾಗಿದೆಯೇ ಎಂದರೆ ಸಾಕ್ಷಿಯು ನನ್ನ ಹೆಸರಿನಲ್ಲಿಯೇ ಖಾತೆ ಇದೆ , ಆದುದರಿಂದ ಆದೇಶ ಪಡೆದಿಲ್ಲ ಎಂದು ತಿಳಿಸಿದ್ದಾರೆ . ನಿಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳುವ ಮೊದಲು ಯಾವುದೇ ವಕೀಲರ ಬಳಿ ಕಾನೂನು ಅಭಿಪ್ರಾಯ ಪಡೆದಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳಿದ್ದಾರೆ . ದಾವಾ ಸ್ವತ್ತಿಗೆ ವಾದಿಗಳು ಕಾನೂನುಬದ್ಧ ಮಾಲೀಕರು ಮತ್ತು ಸ್ವಾಧೀನದಾರರಾಗಿದ್ದಾರೆ ಎಂದರೆ ಸರಿಯಲ್ಲ. ನರಸಿಂಹಯ್ಯ ರವರ ಮರಣಾ ನಂತರ ದಾವಾ ಸ್ವತ್ತನ್ನು ಅವರ ಪತ್ನಿ 1 ನೇ ವಾದಿ ಸಿದ್ದಮ್ಮ ರವರಿಗೆ 2 ಮತ್ತು 3 ನೇ ವಾದಿಗಳು ಜೀವನಾಂಶಕ್ಕೆಂದು ಬಿಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ನಂತರವೂ ಸಹಾ 1 ನೇ ವಾದಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಳ್ಳದೇ , ಖಾತೆ ಸೀಬನಯ್ಯ ರವರ ಹೆಸರಿನಲ್ಲಿಯೇ ಇದೆ

ಎಂದು ತಿಳಿದುಕೊಂಡಿದ್ದರು ಎಂದರೆ ಸರಿಯಲ್ಲ. ADLR ರವರಿಂದ ದುಬಾರಿ ಪೋಡ್ ಆಗಿರುವ ಸಂಬಂಧ ನೋಟಿಸ್ ಬಂದ ನಂತರವೇ ವಾದಿಗಳಿಗೆ ನನ್ನ ಹೆಸರಿನಲ್ಲಿ ಖಾತೆ ಇರುವುದು ತಿಳಿಯಿತು ಎಂದರೆ ಸರಿಯಲ್ಲ. ಆ ನಂತರವೇ ವಾದಿಗಳು ಎಲ್ಲಾ ದಾಖಲೆಗಳನ್ನು ಪಡೆದುಕೊಂಡು ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹೇಗಾದರೂ ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಗಳು ಇಲ್ಲದಿದ್ದ ಸಮಯದಲ್ಲಿ ಅಲ್ಲಿ ಬೆಳೆದಿದ್ದ ಅಡಿಕೆ ಮತ್ತು ತೆಂಗಿನ ಫಲವನ್ನು ಕಳ್ಳತನದಿಂದ ಕಿತ್ತುಕೊಂಡು ಹೋಗಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 154/3 ಎ ಸ್ವತ್ತಿನ ಉತ್ತರಕ್ಕೆ ಗಂಗಪ್ಪ ರವರ ಸ್ವತ್ತು ಇರುತ್ತದೆ . ದಾವಾ ಸ್ವತ್ತಿನ ಉತ್ತರಕ್ಕೆ4 ಚಂದ್ರಪ್ಪ ರವರ ಸ್ವತ್ತು ಇದೆ . ಪೂರ್ವಕ್ಕೆ ಅಡವಿಶಪ್ಪ ರವರ ಸ್ವತ್ತು , ಪಶ್ಚಿಮಕ್ಕೆ ಸಿದ್ದಪ್ಪ ರವರ ಸ್ವತ್ತು .

ಸರ್ವೆ ನಂ. 154ರ ಮೂಲ ಮಾಲಿಕರು ಸಿದ್ದಪ್ಪ ರವರ ತಂದೆ ಎಂದರೆ ಸರಿ . ದಾವಾ ಸ್ವತ್ತು ನನಗೆ ಸೇರಿದ್ದು ಎಂದು ಸಾಬೀತುಗೊಳಿಸಲು ಗ್ರಾಮಸ್ಥರನ್ನು ಕರೆಸಲು ಯಾವುದೇ ತೊಂದರೆ ಇರುವುದಿಲ್ಲ . ವಾದಿಗಳಾಗಲೀ ಅವರ ಪೂರ್ವಿಕರಾಗಲೀ ನಮಗೆ ದಾವಾ ಸ್ವತ್ತಿನ ಸಂಬಂಧ ಯಾವುದೇ ದಾಖಲೆಗಳನ್ನು ಮಾಡಿಕೊಡದಿದ್ದರೂ ಸಹಾ ದಾವಾ ಸ್ವತ್ತು ನಮಗೆ ಸೇರಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ತಂದೆಯ ಮೂಲಕ ನನಗೆ ಬಂದಿದೆ ಎಂದು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

Sd/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ